# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1333
ಸದಸ್ಯರ ಹೆಸರು : ಶ್ರೀ ಎನ್.ರವಿಕುಮಾರ್
(ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 18-03-2020
ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಚಾಮುಂಡೇಶ್ವರಿ ಬ್ಯುಲ್ಡ್ ಟೆಕ್ ಕಂಪನಿ ರಾಮನಗರ ಜಿಲ್ಲೆಯ ಬಿಡದಿ ಹೋಬಳಿ ಶಾನಮಂಗಲ ಬಿಲ್ಲ ಕೆಂಪನ ಹಳ್ಳಿ ಮತ್ತು ಬಾಣಂದೂರು ಗ್ರಾಮಗಳಲ್ಲಿ 106 ಎಕರೆ 12 ಗುಂಟೆ ಜಮೀನು ಒತ್ತುವರಿ ಮಾಡಿದ್ದು ತೆರವುಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಈ ಕಂಪನಿಯ ಮಾಲೀಕರು ಮತ್ತು ಪ್ರವರ್ತಕರು ಯಾರು; | ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕು, ಬಿಡದಿ ಹೋಬಳಿಯ ವಿವಿಧ ಗ್ರಾಮಗಳಲ್ಲಿನ ಸರ್ಕಾರಿ ಜಮೀನನ್ನು ಮೆ॥ ಚಾಮುಂಡೇಶ್ವರಿ ಬಿಲ್ಡ್‌ಟೆಕ್ ಪ್ರೈ.ಲಿ ಸಂಸ್ಥೆಯವರು ಅನಧಿಕೃತವಾಗಿ ಒತ್ತುವರಿ ಮಾಡಿರುವ ಸಂಬಂಧ ಮಾನ್ಯ ಭಾರತ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಾಗಿದ್ದ ಮೇಲ್ಮನವಿ ಪ್ರಕರಣ ಸಿವಿಲ್-ಅಪೀಲು ನಂ:5181-5182/2003ರ ದಿನಾಂಕ:16.01.2014 ರಂದು ಈ ಕೆಳಕಂಡಂತೆ ಅಂತಿಮ ಆದೇಶ ಹೊರಡಿಸಿರುತ್ತದೆ.<br>(i). The appellant will hand over the excess land (28 acres and 33 guntas) as recorded in the order of this court dated 6 th September, 2011.(ii). As stated by Mr.Patil learned senior counsel appearing for the state of Karnataka, a sub committee of the cabinet of Government of Karnataka will thereafter decide the market rate for the remaining land (77 Acres and 19 Guntas) in accordance with law. This will be done after considering the report of the Deputy Commissioner, report of the secretary as well as the statement filed or to be filed by the appellant. The sub-committee will afford a personal hearing to the appellant. The appellant shall pay to the Government of Karnataka the amount fixed by the Cabinet sub-committee within four months from the communication of the decision of the Cabinet sub-committee. In the event, the appellant fails to make payment, it will as open to the Government of Karnataka to resume the land.<br>ಮಾನ್ಯ ಸರ್ವೋಚ್ಚ ನ್ಯಾಯಾಲಯದ ಅಂತಿಮ ಆದೇಶದನ್ವಯ ಈಗಲ್ಟನ್ ಸಂಸ್ಥೆಯವರು ಒತ್ತುವರಿ ಮಾಡಿಕೊಂಡಿರುವ ಸರ್ಕಾರಿ ಜಮೀನಿನ ಪೈಕಿ 28-33 ಎ:ಗು ಜಮೀನನ್ನು ಈಗಾಗಲೇ ಸರ್ಕಾರದ |
| ಆ) | ಚಾಮುಂಡೇಶ್ವರಿ ಬ್ಯುಲ್ಡ್ ಟೆಕ್ ಕಂಪನಿ ಒತ್ತುವರಿ ಮಾಡಿದ ಜಾಗಕ್ಕೆ 982 ಕೋಟಿಯನ್ನು ಸರ್ಕಾರಕ್ಕೆ ಪಾವತಿಸಲು ಮಾನ್ಯ ಸರ್ವೋಚ್ಚ ನ್ಯಾಯಾಲಯ ಆದೇಶ ಮಾಡಿದ್ದರೂ ಇದುವರೆಗೆ ಸದರಿ ಮೊತ್ತವನ್ನ ವಸೂಲಿ ಮಾಡದಿರಲು ಕಾರಣವೇನು; ಈ ಮೊತ್ತವನ್ನು ಪಾವತಿಸುವಂತೆ ಕೋರಿ ಎಷ್ಟು ಬಾರಿ ನೋಟಿಸ್ ನೀಡಲಾಗಿದೆ; | |

ವಶಕ್ಕೆ ಪಡೆದುಕೊಳ್ಳಲಾಗಿದ್ದು, ಸರ್ಕಾರದ ಆದೇಶ ಸಂ:ಆರ್‌ಡಿ 399 ಎಲ್‌ಜಿಬಿ 2011. ಬೆಂಗಳೂರು, ದಿ:23.09.2016ರ ಆದೇಶದನ್ವಯ 77–19 ಎ:ಗು ಸರ್ಕಾರಿ ಜಮೀನಿಗೆ ಕರ್ನಾಟಕ ರಾಜ್ಯ ಸಚಿವ ಸಂಪುಟದ ಉಪ ಸಮಿತಿಯು ನಿಗದಿಪಡಿಸಿದ ಒಟ್ಟು ರೂ 982,07,77,480/– ಗಳ ಮಾರುಕಟ್ಟೆ ದರವನ್ನು ನಾಲ್ಕು ತಿಂಗಳೊಳಗಾಗಿ ಪಾವತಿಸುವಂತೆ ಅರ್ಜಿದಾರ ಸಂಸ್ಥೆಗೆ ದಿ:24.09.2016 ರಂದು ಹಿಂಬರಹ ನೀಡಲಾಗಿರುತ್ತದೆ.

ಸದರಿ ಸಂಸ್ಥೆಯವರು ಸರ್ಕಾರದ ಆದೇಶ ಸಂ:ಆರ್‌ಡಿ 399 ಎಲ್‌ಜಿಬಿ 2011. ಬೆಂಗಳೂರು, ದಿ:23.09.2016ರ ಆದೇಶ ಮತ್ತು ದಿ:24.09.2016 ರಂದು ನೀಡಲಾದ ಹಿಂಬರಹವನ್ನು ಪ್ರಶ್ನಿಸಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ನಂ:65494/2017 ರಂತೆ ಪ್ರಕರಣ ದಾಖಲಿಸಿದ್ದು, ಘನ ನ್ಯಾಯಾಲಯವು ದಿನಾಂಕ:06.02.2017 ರಲ್ಲಿ ಈ ಕೆಳಕಂಡಂತೆ ಆದೇಶಿಸಿರುತ್ತದೆ.

"The learned Senior Counsel appearing for the petitioner submits that as submitted by him in the earlier hearing, he would make a deposit of a sum of Rs.12,35,80,000/- within one week from today.

His Submission is noted. Respondent No.3 shall receive the amount of Rs.12,35,80,000/- to be paid by the petitioner.

The memo dated 06.02.2017 is accepted. The impugned order at Annexure-A is directed to be considered as Show Cause Notice. on treating it as a Show Cause Notice, the petitioner to file objections to the same within a period of two weeks from today. The petitioner without further notice shall appear before the Chief Secretary/Cabinet Sub Committee on 20.02.2017, who shall hear the petitioner and thereafter pass appropriate orders in accordance with law and facts.

It is needless to state that any order to be passed subsequent to the hearing, would necessarily be a fresh order/adjudication."

writ petition disposed off accordingly.

ಮಾನ್ಯ ನ್ಯಾಯಾಲಯದ ದಿನಾಂಕ:06.02.2017 ರ ಆದೇಶದಂತೆ ಸದರಿ ಸಂಸ್ಥೆಯು ರೂ.12,35,80,000/– ಗಳನ್ನು ದಿನಾಂಕ:14.02.2017 ರಂದು ಸರ್ಕಾರಕ್ಕೆ ಪಾವತಿಸಿರುತ್ತಾರೆ.

ಮುಂದುವರೆದು, ಮಾನ್ಯ ನ್ಯಾಯಾಲಯವು ದಿನಾಂಕ:06.02.2017 ರಲ್ಲಿ ನಿರ್ದೇಶಿಸಿರುವಂತೆ ಸರ್ಕಾರದ ಸಂ:ಆರ್‌ಡಿ 399 ಎಲ್‌ಜಿಬಿ 2011. ಬೆಂಗಳೂರು, ದಿ:03.08.2017 ರ ಆದೇಶದನ್ವಯ 77-19 ಎ:ಗು ಸರ್ಕಾರಿ ಜಮೀನಿಗೆ ಕರ್ನಾಟಕ ರಾಜ್ಯ ಸಚಿವ ಸಂಪುಟದ ಉಪ ಸಮಿತಿಯು ನಿಗದಿಪಡಿಸಿದ ಒಟ್ಟು ರೂ 982,07,77,480/- ಗಳ ಮಾರುಕಟ್ಟೆ ದರವನ್ನು ಒಂದು ತಿಂಗಳೊಳಗಾಗಿ ಪಾವತಿಸುವಂತೆ ಅರ್ಜಿದಾರ ಸಂಸ್ಥೆಗೆ ದಿನಾಂಕ:07.08.2017 ರಂದು ಮತ್ತೊಮ್ಮೆ ಹಿಂಬರಹ ಮೂಲಕ ತಿಳಿಸಲಾಗಿದ್ದು, ಸದರಿ ಸಂಸ್ಥೆಯವರು ಸರ್ಕಾರದ ಆದೇಶ ಸಂ:ಆರ್‌ಡಿ 399 ಎಲ್‌ಜಿಬಿ 2011. ದಿ:03.08.2017 ರ ಆದೇಶ ಮತ್ತು ದಿನಾಂಕ:07.08.2017 ರಂದು ನೀಡಲಾದ ಹಿಂಬರಹವನ್ನು ಪ್ರಶ್ನಿಸಿ ಮತ್ತೊಮ್ಮೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ನಂ:38312/2017 ರಂತೆ ಪ್ರಕರಣ ದಾಖಲಿಸಿದ್ದು, ಘನ ನ್ಯಾಯಾಲಯವು ದಿನಾಂಕ:04.09.2017 ರಂದು ಈ ಕೆಳಕಂಡಂತೆ ಆದೇಶಿಸಿರುತ್ತದೆ.

## ORDER

Heard the learned Senior counsel Sri K.G Raghavan for petitioner and the learned Adovocate General.

Learned Adovocate General submits that as the matter has got a checkered history, the State has to file statement of objections meeting various contentions raised in the writ petition. He has also pointed out, at the outset, that in the light of the final order passed by the Apex court as the State Government has passed the impugned order based on the decision taken by the cabinet sub-committee, the controversy raised by the petitioner is not justifiable and the writ petition itself is not maintainable. He, However, submits that if three weeks time is granted detailed objections will be filed and the matter may be taken up for consideration thereafter.

I find that time as sought by learned Adovocate General deserves to be granted in this case as the stand of State Government by way of statement of objections is necessary. Learned Adovocate General also states that until statement of objections are filed and the matter is listed on the next date of hearing, no precipitative action would be taken in the matter.

In the light of the above submission, three

| | | |
|---|---|---|
| | | weeks time is granted to file statement of objections.<br>Re-list after three weeks.<br>ಮಾನ್ಯ ನ್ಯಾಯಾಲಯದ ಆದೇಶದಂತೆ ವ್ಯಾಜ್ಯ ನಿರ್ವಹಣಾಧಿಕಾರಿ ಮತ್ತು ಶಫಥಾಧಿಕಾರಿಯಾದ ಉಪವಿಭಾಗಾಧಿಕಾರಿ, ರಾಮನಗರ ಉಪವಿಭಾಗ, ರವರು ದಿನಾಂಕ:07.01.2019 ರಂದು ಘನ ನ್ಯಾಯಾಲಯಕ್ಕೆ ಆಕ್ಷೇಪಣಾ ಹೇಳಿಕೆಗಳನ್ನು ಶಫಥೀಕರಿಸಿ ಸಲ್ಲಿಸಿರುತ್ತಾರೆ. ಪ್ರಸ್ತುತ ಪ್ರಕರಣವು ಘನ ನ್ಯಾಯಾಲಯದ ಮುಂದೆ ಇತ್ಯರ್ಥಕ್ಕೆ ಬಾಕಿ ಇರುತ್ತದೆ.<br><br>ಮೆ.ಚಾಮುಂಡೇಶ್ವರಿ ಬಿಲ್ಡ್‌ಟೆಕ್, ಪ್ರೈ.ಲಿ. ಸಂಸ್ಥೆಯ ಮಾಲೀಕರ ಬಗ್ಗೆ ಕಡತದಲ್ಲಿ ಲಭ್ಯವಿರುವ ದಾಖಲೆಗಳಂತೆ ರಾಮನಗರ ತಾಲ್ಲೂಕು, ಬಿಡದಿ ಹೋಬಳಿಯ ವಿವಿಧ ಗ್ರಾಮಗಳಲ್ಲಿನ ಸರ್ಕಾರಿ ಜಮೀನನ್ನು ಮೆ॥ ಚಾಮುಂಡೇಶ್ವರಿ ಬಿಲ್ಡ್‌ಟೆಕ್ ಪ್ರೈ.ಲಿ ಸಂಸ್ಥೆಯವರು ಅನಧಿಕೃತವಾಗಿ ಒತ್ತುವರಿ ಮಾಡಿರುವ ಸಂಬಂಧ ಒತ್ತುವರಿಯನ್ನು ತೆರವುಗೊಳಿಸಲು ತಹಶೀಲ್ದಾರ್, ರಾಮನಗರ ತಾಲ್ಲೂಕು, ರವರು ದಿನಾಂಕ:03.10.1998 ರಲ್ಲಿ ನೀಡಿರುವ ಅಂತಿಮ ತೆರವು ನೋಟಿಸ್‌ನಲ್ಲಿ ಶ್ರೀ ಅಶೋಕ್ ಕುಮಾರ್, ಮ್ಯಾನೇಜಿಂಗ್ ಡೈರೆಕ್ಟರ್, ಮೆ.ಚಾಮುಂಡೇಶ್ವರಿ ಬಿಲ್ಡ್‌ಟೆಕ್, ಪ್ರೈ.ಲಿ. ಎಂದು ವಿಳಾಸಿಸಿರುವುದು ಕಂಡುಬಂದಿರುತ್ತದೆ. |
| ಇ) | ಒತ್ತುವರಿ ಮಾಡಿರುವ ಜಾಗದಲ್ಲಿ ಯಾವ ಆಧಾರದ ಮೇಲೆ ಯಾವ ಕಾನೂನಿನನ್ವಯ ವ್ಯವಹಾರ ಮಾಡಲು ಅನುಮತಿ ನೀಡಲಾಗಿದೆ; ಅನುಮತಿ ನೀಡಿದ್ದಲ್ಲಿ, ಸದರಿ ಅನುಮತಿಯನ್ನು ರದ್ದುಗೊಳಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ; ಒತ್ತುವರಿ ಜಾಗದಲ್ಲಿ ಆರ್ಥಿಕ ವ್ಯವಹಾರ ನಡೆಸಲು ಅನುಮತಿ ನೀಡಿದವರು ಯಾರು; | ಈಗಲ್ಟನ್ ಸಂಸ್ಥೆಯವರು ಒತ್ತುವರಿ ಮಾಡಿಕೊಂಡಿರುವ ಸರ್ಕಾರಿ ಜಮೀನಿನ ಪೈಕಿ 28–33 ಎ:ಗು ಜಮೀನನ್ನು ಈಗಾಗಲೇ ಸರ್ಕಾರದ ವಶಕ್ಕೆ ಪಡೆದುಕೊಳ್ಳಲಾಗಿದ್ದು, ಅನಧಿಕೃತ ಒತ್ತುವರಿಯಲ್ಲಿರುವ 77 ಎಕರೆ 19 ಗುಂಟೆ ಸರ್ಕಾರಿ ಜಮೀನಿಗೆ ಸಂಬಂಧಿಸಿದಂತೆ ಅನಧಿಕೃತ ಚಟುವಟಿಕೆಗಳನ್ನು ನಡೆಸಲು ಕಂದಾಯ ಇಲಾಖೆ ವತಿಯಿಂದ ಸಂಸ್ಥೆಗೆ ಯಾವುದೇ ಅನುಮತಿ ನೀಡಿರುವುದಿಲ್ಲ. |
| ಈ) | ಇತರೆ ಒತ್ತುವರಿದಾರರು ಸಹ ಸರ್ಕಾರಕ್ಕೆ ನಿಗದಿಪಡಿಸಿದ ಮೌಲ್ಯ ಪಾವತಿಸಿದ್ದಲ್ಲಿ ಸರ್ಕಾರಿ ಜಾಗವನ್ನು ಒತ್ತುವರಿದಾರರಿಗೆ ನೀಡಬಹುದೆಂಬ ನಿಯಮವಿದೆಯೇ; ಈಗಲ್ ಟನ್ ರೆಸಾರ್ಟ್‌ಗೆ ನೀಡಿರುವ ಈ ಸೌಲಭ್ಯವನ್ನು ಇತರೆ ಭೂ ಒತ್ತುವರಿದಾರರಿಗೂ ನೀಡುವ ಕುರಿತು ಸರ್ಕಾರದ ನಿಲುವೇನು? | ಇಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |

**ಸಂಖ್ಯೆ: ಆರ್‌ಡಿ 61 ಎಲ್‌ಜಿಕ್ಯೂ 2020 (ಇ)**

(ಆರ್.ಅಶೋಕ)
**ಕಂದಾಯ ಸಚಿವರು**